VIJAYAKUMAR KANNUR
Digitally signed by VIJAYAKUMAR KANNUR
Date: 2026.02.02 16:23:02 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 02.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 3 ರಿಂದ 5 ರವರ ಪರ ಶ್ರೀ ಎಂ ಎಸ್ ಸಿ ವಕೀಲರಿಂದ :**

ನಾನು ಬಿ. ಕಾಂ ಪದವಿಧರನಾಗಿರುವೆನು. ಸರ್ವೇ ನಂಬರ್ 83/2 ಇದರ ಒಟ್ಟು ವಿಸ್ತೀರ್ಣ 7 ಎಕರೆ 21 ಗುಂಟೆ ಜಮೀನು ಇರುವುದು. ಈ ಜಮೀನಿನಲ್ಲಿ ನನ್ನ ಮತ್ತು ನನ್ನ ಸಹೋದರಿ ಪ್ರತಿವಾದಿ 2 ರವರ ಮಧ್ಯೆ 2004 ರಲ್ಲಿ ಪಾಲು ವಾಟ್ನಿಯಾಗಿರುವುದು ಎಂದರೆ ಸರಿ. ನನಗೆ ಈ ಸರ್ವೇ ನಂಬರನ ಪಶ್ಚಿಮ ಭಾಗದ 2 ಎಕರೆ 1 ಗುಂಟೆ ಜಮೀನು ಬಂದಿರುವುದು. ಪೂರ್ವ ಭಾಗದ 5 ಎಕರೆ 20 ಗುಂಟೆ ಜಮೀನು ಪ್ರತಿವಾದಿ 2 ರವರ ಪಾಲಿಗೆ ಬಂದಿರುವುದು. ಈ ಪಾಲು ವಾಟ್ನಿಯ ಪ್ರಕಾರ ನನ್ನ ಪಾಲಿಗೆ ಬಂದಿರುವ ಜಮೀನು ನಾನು ಮತ್ತು ಪ್ರತಿವಾದಿ 2 ರವರ ಪಾಲಿಗೆ ಬಂದಿರುವ ಜಮೀನು ಅವಳು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿರುವೆವು ಎಂದರೆ ಸರಿ. ಪ್ರತಿವಾದಿ 2 ರವರ ಪಾಲಿಗೆ ಬಂದಿರುವ ಜಮೀನನ್ನು ಅವಳು 2007 ರಲ್ಲಿ ಬಸಪ್ಪ ಅಡವಿ ಎಂಬುವವರಿಗೆ ಮಾರಾಟ ಮಾಡಿರುವಳು ಎಂದರೆ ಸರಿ. ಈ ಪಾಲು ವಾಟ್ನಿಯ ಪ್ರಕಾರ ನನ್ನ ಪಾಲಿಗೆ ಬಂದಿರುವ ಜಮೀನಿನ ಸರ್ವೇ ನಂಬರ್ 83/2/ಅ ಮತ್ತು ಪ್ರತಿವಾದಿ 2 ರವರ ಪಾಲಿಗೆ ಬಂದಿರುವ ಜಮೀನಿನ ಸರ್ವೇ ನಂಬರ್ 83/2/ಬ ಎಂದರೆ ಸರಿ.

2. ಸರ್ವೇ ನಂಬರ್ 83/2 ರ ಒಟ್ಟು ಜಮೀನಿನ ಉತ್ತರ ದಿಕ್ಕಿಗೆ ಮುಧೋಳ -ಮಳಲಿಗೆ ಹೋಗುವಂತಹ ರಸ್ತೆ ಇರುವುದು ಎಂದರೆ ಸರಿ. ನನ್ನ ಹಿಸ್ಸೆಗೆ ಬರುವಂತಹ ಜಮೀನಿನ ದಕ್ಷಿಣ ದಿಕ್ಕಿಗೆ ಘಟಪ್ರಭಾ ನದಿ ಹೊಂದಿಕೊಂಡಿರುವುದು ಎಂದರೆ ಸರಿ. ನನ್ನ ಪಾಲಿಗೆ ಬಂದಿರುವ 2 ಎಕರೆ 1 ಗುಂಟೆ ಜಮೀನಿನ ಪೂರ್ವಕ್ಕೆ ಪ್ರತಿವಾದಿ 2 ರವರ ಪಾಲಿಗೆ ಬಂದಿರುವ 5 ಎಕರೆ 20 ಗುಂಟೆ ಜಮೀನು ಇರುವುದು ಎಂದರೆ ಸರಿ. 2007 ರ ನಂತರ ಸರ್ವೇ ನಂಬರ್ 83/2/ಬ ಆಸ್ತಿಯನ್ನು ಪ್ರತಿವಾದಿ 3 ರಿಂದ 5 ರವರು ಕಬ್ಜೆ

ವಹಿವಾಟಿಯನ್ನು ಹೊಂದಿ ಸಾಗುವಳಿ ಮಾಡುತ್ತಾ ಬಂದಿರುವರು ಎಂದರೆ ಸರಿ. ವಾದ ಪತ್ರ ಜೊತೆ ಲಗತ್ತಿಸಿರುವ ಷೆಡ್ಯೂಲ್ 'ಬಿ' ಕಚ್ಚಾ ನಕಾಶೆಯಲ್ಲಿ ತೋರಿಸುವಂತ ಪೂರ್ವ ಭಾಗದಿಂದ ದಕ್ಷಿಣ ಭಾಗಕ್ಕೆ ಹೋಗುವ ರಸ್ತೆ ಇರುವುದು. ಈ ವಾದ ಪತ್ರದ ನಕಾಶೆಯಲ್ಲಿ ಕಾಣಿಸಿರುವಂತೆ ABCDEF ಎಂಬ ಅಕ್ಷರಗಳ ಮಧ್ಯೆ ಕಾಣಿಸಿರುವಂತಹ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿ ಪಾಲು ವಾಟ್ನಿ ಮಾಡಿಕೊಂಡ ನಂತರ ದಾರಿಯ ಹಕ್ಕನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕಿಂತ ಮೊದಲೇ ದಾರಿಯ ಹಕ್ಕನ್ನು ನೀಡಿರುವುದಾಗಿ ಎಂದು ನುಡಿಯುವರು. ದಾವಾ ಆಸ್ತಿಯನ್ನು ಪಾಲು ವಾಟ್ನಿ ಮಾಡಿಕೊಳ್ಳುವ ಪೂರ್ವದಲ್ಲಿ ನನ್ನ ಹೆಸರು ಇತ್ತು, ಆ ಸಮಯದಲ್ಲೇ ನೀಡಿರುವೆನು. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನಾನು ಹಾಜರು ಪಡಿಸಿರುವೆನು. ಈ ದಾರಿ ಹಕ್ಕನ್ನು ನೀಡುವ ಸಮಯದಲ್ಲಿ ಪ್ರತಿವಾದಿ 2 ರವರ ಸಮ್ಮತಿಯನ್ನು ನಾನು ಪಡೆದುಕೊಂಡಿರುವುದಿಲ್ಲ, ಏಕೆಂದರೆ ಈ ಮೊದಲು ಆಸ್ತಿ ನನ್ನ ಹೆಸರಿನಲ್ಲಿ ಇರುವುದರಿಂದ ನಾನೇ ದಾರಿಯ ಹಕ್ಕನ್ನು ನೀಡಿರುವೆನು. 2007 ರ ನಂತರ ಬರಹ ರೂಪದಲ್ಲಿ ನಾನು ದಾರಿಯ ಹಕ್ಕನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

3. ನಿಪಿ 24 ರ ಪ್ರಕಾರ ದಾರಿಯ ಹಕ್ಕನ್ನು ದಿಃ 20.11.2014 ರಂದು ಬರೆದುಕೊಟ್ಟಿದ್ದೇನೆ ಎಂದರೆ ನನ್ನ ಸಹೋದರಿ-ಪ್ರತಿವಾದಿ 2 ಏನ ಒಪ್ಪಿಗೆ ಪಡೆದುಕೊಂಡೇ ಬರೆದುಕೊಟ್ಟಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನಿಪಿ 24 ರ ದಾಖಲೆಯ ಮೇಲೆ ಪ್ರತಿವಾದಿ 2 ರವರು ಒಪ್ಪಿಗೆ ನೀಡಿದ ಬಗ್ಗೆ ಸಹಿ ಪಡೆದುಕೊಂಡಿರುವುದಿಲ್ಲ ಮತ್ತು ಇದಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ 2 ರವರ ಲಿಖಿತ ರೂಪದ ಒಪ್ಪಿಗೆಯನ್ನು ಸಹ ಪಡೆದುಕೊಂಡಿರುವುದಿಲ್ಲ. ನಿಪಿ 33 ರ ದಾಖಲೆಯ ಪ್ರಕಾರ ದಿಃ 30.11.2018 ರಂದು ದಾರಿಯ ಹಕ್ಕಿನ ಬಗ್ಗೆ ದಾಖಲೆಯನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿ. ಇದಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ 2 ರವರ ಒಪ್ಪಿಗೆಯನ್ನು ಪಡೆದುಕೊಂಡಿರುವುದಿಲ್ಲ. ಪ್ರತಿವಾದಿ 3 ರಿಂದ 5 ರವರ ಮೌಖಿಕ ಒಪ್ಪಿಗೆಯನ್ನು ಪಡೆದುಕೊಂಡಿರುವೆನು. ನನಗೆ ಸಂಬಂಧ ಇರದೇ ಇದ್ದರೂ ಸಹಿತ ವಾದಿಯರಿಗೆ ದಾರಿಯ ಹಕ್ಕನ್ನು ನೀಡಿದ್ದೇನೆ ಅಂತ ಸೂಚಿಸುವುದು ಸರಿಯಲ್ಲ.

4. ABCDI ಎಂಬ ಅಕ್ಷರದ ರಸ್ತೆಯೂ ನನಗೆ ಸಂಬಂಧ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾರಿಗೆ ಸಂಬಂಧಪಟ್ಟಂತೆ 2004 ರಲ್ಲೇ ನನ್ನ ಮಾಲೀಕತ್ವದ ಹಕ್ಕು ಕೊನೆಗೊಂಡಿರುವುದು ಎಂದರೆ ಸರಿಯಲ್ಲ. ಆ ರಸ್ತೆಯನ್ನು ತಾನು ಉಪಯೋಗಿಸುತ್ತಾ ಬಂದಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ದಿಃ 04.02.2004 ರಂದು ನನ್ನ ಮತ್ತು ಪ್ರತಿವಾದಿ 2 ವಿನ ಮಧ್ಯೆ ಸರ್ವೇ ನಂಬರ್ 83/2 ರ ಜಮೀನಿಗೆ ಸಂಬಂಧಪಟ್ಟಂತೆ ಪಾಲು ವಾಟ್ನಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಈ ದಾಖಲೆಯನ್ನು ನೊಂದಣಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ದಾಖಲೆಯ ಅಂತರ ಜಾಲದ ನಕಲು ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ, ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ದಾಖಲೆಯನ್ನು **ನಿಡಿ 1** ಎಂದು ಗುರುತಿಸಲಾಯಿತು. ಈ ಪಾಲು ವಾಟ್ನಿ ಮಾಡಿಕೊಂಡ ಪ್ರಕಾರ ಈ ಮಧ್ಯದ ಭಾಗದಲ್ಲಿ ಮಾತ್ರ ನನಗೆ ಹಕ್ಕು ಇತ್ತು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಅದು ತನ್ನ ಸ್ವಂತ ಉಪಯೋಗಕ್ಕೆ ಮಾತ್ರ ರಸ್ತೆ ಇರುವುದು, ನೀರಾವರಿ ಮೋಟರಗಳಿಗೆ ಸಂಬಂಧಪಟ್ಟಂತೆ ಈ ಕಚ್ಚಾ ನಕಾಶೆಯಲ್ಲಿ ತೋರಿಸಿರುವಂತಹ ರಸ್ತೆ ಮೊದಲಿನಿಂದಲೂ ಇತ್ತು ಎಂದು ಸಾಕ್ಷಿ ಉತ್ತರಿಸುವರು. ನಿಡಿ 1 ರ ದಾಖಲೆಯಲ್ಲಿ ವಾದಿಯರಿಗೆ ಈ ದಾರಿ ಹಕ್ಕು ಇದ್ದ ಬಗ್ಗೆ ಅದರಲ್ಲಿ ಕಾಣಿಸಿರುವುದಿಲ್ಲ ಮತ್ತು ಅವರ ಹೆಸರಗಳು ಸಹ ಇರುವುದಿಲ್ಲ. ನಿಡಿ 1 ರ ದಾಖಲೆಯಲ್ಲಿ ವಾದಿಯರಿಗೆ ರಸ್ತೆ ಇರುವುದಾಗಿ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ, ಆದರೆ ಈ ಮೊದಲಿನಿಂದಲೂ 8 ಜನರು ನಮ್ಮ ಜಮೀನಿನಲ್ಲಿ ನೀರಾವರಿ ಪೈಪ್ ಲೈನನ್ನು ಕೂಡಿಸಿಕೊಂಡಿರುವರು. ವಾದಿಯರು ಮತ್ತು ನನ್ನ ಮಧ್ಯೆ ಈ ನೀರಾವರಿಯ ಪೈಪ್ ಗೆ ಸಂಬಂಧಪಟ್ಟಂತೆ ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ವಾದಿ ನಂ. 5 ರವರ ವಿರುದ್ದ ಮುಧೋಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದೇನೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಬೆಳೆದಿರುವ ಬೆಳೆಗೆ ಹಾನಿಯುಂಟುಮಾಡಿರುವುದರಿಂದ ದೂರು ದಾಖಲು ಮಾಡಿರುವೆನು. ನಾನು ವಾದಿ 5 ರವರ ವಿರುದ್ದ ಈ ದೂರು ದಾಖಲು ಮಾಡಿರುವ ಕಾರಣಕ್ಕಾಗಿ ವಾದಿಯರು ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರೂ ಸಹಿತ ಈ ಸುಳ್ಳು ದಾವೆ ದಾಖಲು ಮಾಡಿರುವರು

ಎಂದರೆ ಸರಿಯಲ್ಲ. ನಾನು ವಾದಿಯರ ಜೊತೆ ಮಿಲಾಪಿಯಾಗಿ ಅವರಿಗೆ ಪ್ರಚೋದನೆ ನೀಡಿ ಈ ಸುಳ್ಳು ದಾವೆ ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ